ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು

ಸಿ.ಸಿಃ 315/2015

| | | | |
|---|---|---|---|
| ಸಾಕ್ಷಿದಾರರ ಹೆಸರು | | ನೀಲಕುಮಾರ್ | ಫ್ರಾಸಾಃ 3 |
| ತಂದೆಯ/ಗಂಡನ ಹೆಸರು | | ರಾಚನಾಯಕ | ಚಾಸಾಃ 4 |
| ವಯಸ್ಸು | | 27 | |
| ಕೆಲಸ | | ಹೋಟೆಲ್ ವ್ಯಾಪಾರ | ಸಾ ಪ್ರ ಬೋ |
| ವಾಸ | | ಇಬ್ಜಾಲ ಗ್ರಾಮ | ದಿಃ 05.07.2022. |

ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ

ನ್ಯಾಯಾಲಯದ ಮುಂದಿರುವ ಆರೋಪಿಗಳು ನಮ್ಮ ಗ್ರಾಮದವರಾಗಿರುತ್ತಾರೆ , ಚಾಸಾ 1 ಮತ್ತು 2 ರವರು ನನಗೆ ಪರಿಚಿತರಿಲ್ಲ. ಚಾಸಾ1 ಮತ್ತು 2 ಹಾಗೂ ಆರೋಪಿತರ ನಡುವೆ ನಡೆದ ಗಲಾಟೆ ನಾನು ನೋಡಿಲ್ಲ. ಸದರಿ ಪ್ರಕರಣದ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲ.

**2.** ನನಗೆ ಈಗ ಮಹಜರ್ ನಲ್ಲಿರುವ ನನ್ನ ಸಹಿಯನ್ನು ತೋರಿಸಿದ್ದು , ಸದರಿ ಮಹಜರ್ ನ್ನು ಈಗಾಗಲೇ ನಿಪಿ-2 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸುಮಾರು 7 ವರ್ಷಗಳ ಹಿಂದೆ ಠಾಣೆಯಲ್ಲಿ ಪೋಲೀಸರ ಕೋರಿಕೆಯ ಮೇರೆಗೆ ನಿಪಿ-2 ಕ್ಕೆ ನನ್ನ ಸಹಿಯನ್ನು ಮಾಡಿರುತ್ತೇನೆ. ನನಗೆ ನಿಪಿ-2 ರಲ್ಲಿ ಬರೆದ ವಿಚಾರಗಳು ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸಿಲ್ಲ

( ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾನೆ. ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು )

ಪಾಟೀ ಸವಾಲುಃ ಶ್ರೀ ಎಪಿಪಿ ಯವರಿಂದಃ

**3.** ನನ್ನ ತಂದೆ ನಮ್ಮ ಊರಿನ ಮುಖ್ಯ ರಸ್ತೆಯಲ್ಲಿ ಒಂದು ಚಿಕ್ಕ ಹೋಟೆಲ್ ಇಟ್ಟುಕೊಂಡಿದ್ದು ನಾನು ಕೆಲಸಕ್ಕೆ ಹೋಗದ ದಿನ ಸದರಿ ಹೋಟೆಲ್ ನಲ್ಲಿ ಕೆಲಸ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ದಿನಾಂಕ **29.09.2014** ರಂದು ನಾನು ಕೂಲಿ ಕೆಲಸಕ್ಕೆ ಹೋಗದೆ ಹೋಟೆಲ್ ನಲ್ಲಿಯೇ ಇದ್ದೆನು ಎಂದರೆ ಸರಿ. ಸಂಜೆ ಸುಮಾರು **05.30** ರ ಸಮಯದಲ್ಲಿ ಎಂದಿನಂತೆ ನಮ್ಮ ಊರಿನ ಮಾರ್ಗವಾಗಿ ಹೋಗುವ ಮಾರ್ಗ ಸಂಖ್ಯೆ **246** ಬಸ್ಸು ಒಮ್ಮರ ಹಳ್ಳಿ ಕಡೆಯಿಂದ ಬಂದಾಗ ನಮ್ಮ ಹೋಟೆಲ್ ಮುಂದಿನ ರಸ್ತೆ ಕಿರಿದಾಗಿದ್ದು ಬಸ್ಸಿನ ಎದುಗಡೆಯಿಂದ ಎತ್ತುಗಳು ಬಂದದ್ದು ನೋಡಿ ಬಸ್ಸಿನ ಚಾಲಕ ಬಸ್ಸನ್ನು ನಿಲ್ಲಿಸಿದ್ದು ಎತ್ತು ಗಳು ಬಸ್ಸಿನ ಪಕ್ಕಕ್ಕೆ

ನಿಧಾನವಾಗಿ ಹೋದವು ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಅಲ್ಲಿಯೇ ಬರುತ್ತಿದ್ದ 1 ನೇ ಆರೋಪಿ ಚಾಸಾ 1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿಯಲ್ಲ. ಆಗ ಅಲ್ಲಿದ್ದವರು ಹೋಗಿ ಸಮಾಧಾನಪಡಿಸುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಕಾಲಕ್ಕೆ ನಾನು ಕೂಡ ಹೋಟೆಲ್‌ನಲ್ಲಿಯೇ ಇದ್ದೆನು ಎಂದರೆ ಸರಿಯಲ್ಲ. ಬಸ್ಸಿನ ಚಾಲಕನ ಸೀಟು ನನ್ನ ಹೋಟೆಲ್‌ಗೆ ಕಾಣಿಸುತ್ತಿದ್ದು ಅಲ್ಲಿದ್ದಂತಹ 1 ನೇ ಆರೋಪಿ ಚಾಸಾ 1 ರವರ ಎದೆಗೆ ಕಾಲಿನಿಂದ ಒದೆಯುತ್ತಿದ್ದ ಎಂದರೆ ಸರಿಯಲ್ಲ. 2 ಮತ್ತು 3 ನೇ ಆರೋಪಿತರು ಚಾಸಾ 1 ರವರಿಗೆ ಕೈಗಳಿಂದ ಹಲ್ಲೆ ಮಾಡಿದರು ಎಂದರೆ ಸರಿಯಲ್ಲ. ಚಾಸಾ 2 ರವರು ಸಮಾಧಾನ ಪಡಿಸಲು ಹೋದಾಗ ಚಾಸಾ 2 ರವರ ಸಮವಸ್ತ್ರವನ್ನು ಹಿಡಿದು ಎಳೆದಾಡಿ ಕೈಗಳಿಂದ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗಳು ಹಾಗೂ ಚಾಸಾ 1 ಮತ್ತು 2 ರವರ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ 1 ಮತ್ತ 2 ರವರು ಸುಮಾರು 1 ವರ್ಷಕ್ಕಿಂತ ಹೆಚ್ಚು ಅವಧಿಯಲ್ಲಿ ನಮ್ಮ ಊರಿನ ಮಾರ್ಗದಲ್ಲಿ ಓಡಾಡುತ್ತಿದ್ದ ಕಾರಣ ಅವರ ಮುಖ ಪರಿಚಯವಿರುತ್ತದೆ ಎಂದರೆ ಸರಿಯಲ್ಲ. ದಿನಾಂಕ 30.09.2014 ರಂದು ಚಾಸಾ 1 ರವರು ಸ್ಥಳ ತೋರಿಸಿದ ಮೇರೆಗೆ ನನ್ನ ಹಾಗೂ ಚಾಸಾ 7 ರವರ ಸಮಕ್ಷಮ ಸಂಜೆ 04.00 ರಿಂದ 04.45 ರವರೆವಿಗೂ ನಿಪಿ-2 ರಂತೆ ವಿವರವಾದ ಮಹಜರ್ ಕ್ರಮ ಜರುಗಿಸಿರುತ್ತಾರೆಂದರೆ ಸರಿಯಲ್ಲ. ನಿಪಿ-2 ನ್ನು ಓದಿ ನೋಡಿ ಸಹಿ ಮಾಡಿರುತ್ತೇನೆಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಮುದ್ದೆ ಮಾಲು ಬಟ್ಟೆಯನ್ನು ನಾನು ಈ ಹಿಂದೆ ನೋಡಿಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ 4 ಎಂದು ಗುರುತಿಸಲಾಯಿತು.

4. ಆರೋಪಿತರು ಹಾಗೂ ನಮ್ಮ ಗ್ರಾಮಸ್ಥರಾದ ಕಾರಣ ಈಗ ರಾಜೀ ಮಾಡಿಕೊಂಡಿರುತ್ತೇವೆಂದರೆ ಸರಿ. ರಾಜೀ ಮಾಡಿಕೊಂಡ ಕಾರಣ ಆರೋಪಿತರನ್ನು ಈ ಪ್ರಕರಣದಿಂದ ಬಚಾವು ಮಾಡುವ ಸಲುವಾಗಿ ಹಾಗೂ ಅವರಿಗೆ ಶಿಕ್ಷೆಯಾಗುವುದನ್ನು ತಪ್ಪಿಸುವ ಸಲುವಾಗಿ ಎಲ್ಲಾ ಗೊತ್ತಿದ್ದರು ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ .

<u>ಪಾಟೀ ಸವಾಲು ಶ್ರೀ ವಕೀಲರಿಂದ ಆರೋಪಿ ಪರವಾಗಿಃ ಏನು ಇಲ್ಲಾ</u>

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ ಎಂ ಒ

ಸಹಿ/-

ಪ್ರಧಾನ ಸಿ.ಜೆ ಮತ್ತು ಪ್ರದನ್ಯಾದಂ,

ನಂಜನಗೂಡು